13. Marine Products	87.36	94.25	85.76	48.12
14. Plastic Goods	75.09	67.90	83.07	47.44
15. Spices	61.00	73.74	69.12	56.56
16. Wool & Woolen Products	43.71	31.22	44.46	37.64
17. Handicrafts	20.12	31.69	48.59	23.12
18. Tobacco / Beedi	16.25	3.23	2.70	1.36
19. Miscellaneous and others	199.53	220.22	612.33	480.12
Total	**12854.25**	**16027.46**	**20145.58**	**10015.75**

ರಾಜ್ಯದಲ್ಲಿ ಕಡಲ ಕೊರೆತದಿಂದ ಆಗಿರುವ ಹಾನಿ

1173 (1891) ಶ್ರೀ ಯೋಗಿಶ್ ಭಟ್ ಎನ್. (ಮಂಗಳೂರು) ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಡಲ ಕೊರೆತದಿಂದ ಆಗಿರುವ ಹಾನಿ ಎಷ್ಟು ; ಎಷ್ಟು ಭೂ ಪ್ರದೇಶ ಜಲಾವೃತವಾಗಿದೆ ?

ಆ) ಕಡಲ ಕೊರೆತ ತಡೆಗಟ್ಟಲು ಸರಕಾರ ಕೈಗೊಂಡ ಕ್ರಮಗಳೇನು ?

ಇ) ಕೈಗೊಂಡ ಕಾಮಗಾರಿಗಳು ಎಷ್ಟು ಹಾಗೂ ಯಾವ ಪ್ರದೇಶದಲ್ಲಿ ಯಾವಾಗ ಕೈಗೊಳ್ಳಲಾಗಿದೆ ?

ಈ) ತಗಲಿದ ವೆಚ್ಚ ಎಷ್ಟು ; ಕಳೆದ 3 ವರ್ಷಗಳ ವಿವರ ಕೊಡುವುದು ?

ಉ) ಈ ಕಾಮಗಾರಿಗಳಲ್ಲಿ ಎಷ್ಟು ಉಳಿದಿವೆ ; ಎಷ್ಟು ಹಾಳಾಗಿವೆ ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ಸುಮಾರು 48.875 ಕಿ.ಮೀ. ಉದ್ದಕ್ಕೆ ಕರಾವಳಿ ಪ್ರದೇಶವು ತೀವ್ರವಾಗಿ ಸಮುದ್ರ ಕೊರೆತದಿಂದ ಹಾನಿಗೊಳಗಾಗಿದೆ. ಅಂದಾಜು 150 ಎಕರೆ ಭೂ ಪ್ರದೇಶ ಜಲಾವೃತವಾಗಿದೆ.

ಆ) ಸಮುದ್ರ ಕೊರೆತ ಸಂರಕ್ಷಣಾ ವಿಷಯವಾಗಿ ರಚಿಸಿದ ಅನುಭವವುಳ್ಳ ತಜ್ಞರು ಹಾಗೂ ಅಧಿಕಾರಿಗಳನ್ನುಳ್ಳ ತಾಂತ್ರಿಕ ಪರಿಣಿತರ ಸಮಿತಿಯ ಸಲಹೆ ಹಾಗೂ ಮಾರ್ಗದರ್ಶನ ಪಡೆದು ಮತ್ತು ಸಿ.ಡಬ್ಲ್ಯೂ.ಪಿ.ಆರ್.ಎಸ್. ಪುಣೆ ಹಾಗೂ ಕೆ.ಇ.ಆರ್.ಎಸ್, ಕೆ.ಆರ್. ಸಾಗರ್ ಇವರಿಂದ ಸೂಕ್ತ ವಿನ್ಯಾಸವನ್ನು ಪಡೆದು ತಡೆಗೋಡೆ ನಿರ್ಮಿಸಿ, ಸಮುದ್ರ ಕೊರೆತ ತಡೆಗಟ್ಟಲಾಗುತ್ತಿದೆ.

ಇ) ಇಲ್ಲಿಯವರೆಗೆ ದಕ್ಷಿಣ ಕನ್ನಡ ಜಿಲ್ಲೆಯ 8.21 ಕಿ.ಮೀ. ಉದ್ದಕ್ಕೆ ಹಾಗೂ ಉಡುಪಿ ಜಿಲ್ಲೆಯ 19.093 ಕಿ.ಮೀ. ಉದ್ದಕ್ಕೆ ಹಾಗೂ ಉತ್ತರ ಕನ್ನಡ ಜಿಲ್ಲೆಯ 21.380 ಕಿ.ಮೀ. ಉದ್ದಕ್ಕೆ ಕರಾವಳಿ ತೀರದ ವಿವಿಧ ಪ್ರದೇಶಗಳಲ್ಲಿ ಶಾಶ್ವತ ತಡೆಗೋಡೆ ನಿರ್ಮಿಸಲಾಗಿದೆ.

ಈ) 1999-2000ನೇ ಸಾಲಿನಲ್ಲಿ ರೂ. 910.54 ಲಕ್ಷಗಳು
2000-2001ನೇ ಸಾಲಿನಲ್ಲಿ ರೂ. 659.00 ಲಕ್ಷಗಳು
2001-2002ನೇ ಸಾಲಿನಲ್ಲಿ ರೂ. 395.44 ಲಕ್ಷಗಳು
2002-2003ನೇ ಸಾಲಿನಲ್ಲಿ ರೂ. 300.00 ಲಕ್ಷಗಳು (31.01.2003 ರವರೆಗೆ)

ಉ) ನಿರ್ಮಿಸಿದ ಹೆಚ್ಚಿನ ಶಾಶ್ವತ ತಡೆಗೋಡೆ ಕಾಮಗಾರಿಗಳು ಉಳಿದಿವೆ. ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ - ಕೋಟೆಪುರ ಹಾಗೂ ಉತ್ತರ ಕನ್ನಡ ಜಿಲ್ಲೆಯ ಪಾವಿನಕುರ್ವೆಗಳಲ್ಲಿ ನಿರ್ಮಿಸಿದ ಕೆಲವು ತಡೆಗೋಡೆಗಳು ಮಾತ್ರ ಕೊಚ್ಚಿ ಹೋಗಿವೆ.

ರಾಜ್ಯದಲ್ಲಿ ಮೀನುಗಾರರಿಗೆ ಸೌಲಭ್ಯ

1175 (1893) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಮೀನುಗಾರರ ಸಂಖ್ಯೆ ಎಷ್ಟು ; ಅವರಲ್ಲಿ ಎಷ್ಟು ಮಂದಿ ಪರ್ಸೀನ್ ಬೋಟುಗಳಲ್ಲಿ, ಟ್ರಾಲ್ ಬೋಟುಗಳಲ್ಲಿ, ನಾಡ ದೋಣಿಗಳಲ್ಲಿ ದುಡಿಯುತ್ತಾರೆ ?

ಆ) ಮೀನುಗಾರರ ಜೀವನ ಮಟ್ಟ ಅಭಿವೃದ್ಧಿಪಡಿಸಲು ಕೈಗೊಂಡ ಕ್ರಮಗಳೇನು ?

ಇ) ಕಳೆದ 3 ವರ್ಷಗಳಲ್ಲಿ ಎಷ್ಟು ಮೀನುಗಾರರಿಗೆ ಮನೆಗಳು, ಮೀನುಗಾರಿಕಾ ರಸ್ತೆ ಹಾಗೂ ಇತರ ಸೌಲಭ್ಯಗಳನ್ನು ಕೊಡಲಾಗಿದೆ ; ಜಿಲ್ಲಾವಾರು ವಿವರಗಳನ್ನು ಕೊಡುವುದು ?

ಈ) ಮಂಗಳೂರು ಹಳೆ ಬಂದರನ್ನು ಸರ್ವಋತು ಮೀನುಗಾರಿಕಾ ಬಂದರನ್ನಾಗಿ ಮಾಡಲು, ಜೆಟ್ಟಿ ನಿರ್ಮಾಣ, ಹೂಳೆತ್ತುವಿಕೆಗೆ ಯಾವ ಕಾರ್ಯಕ್ರಮ ಕೈಗೊಳ್ಳಲಾಗಿದೆ ; ಮೀನುಗಾರರಿಗೆ ಆಧುನಿಕ ತಂತ್ರಜ್ಞಾನ ಕೊಡಲು ಸರ್ಕಾರವು ಯಾವ ಕಾರ್ಯಕ್ರಮ ಕೈಗೊಂಡಿದೆ ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ಸುಮಾರು 7.75 ಲಕ್ಷ ಮೀಗುಗಾರರಿರುತ್ತಾರೆ. ಅವರಲ್ಲಿ ಪರ್ಸೀನ್ ದೋಣಿಗಳಲ್ಲಿ ಸುಮಾರು 8,700 ಟ್ರಾಲ್ ದೋಣಿಗಳಲ್ಲಿ ಸುಮಾರು 18,000 ಮತ್ತು ನಾಡದೋಣಿಗಳಲ್ಲಿ ಸುಮಾರು 15,000 ಮಂದಿ ದುಡಿಯುತ್ತಿದ್ದಾರೆ.

ಆ) ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಇ) ಕಳೆದ ಮೂರು ವರ್ಷಗಳಲ್ಲಿ 5000 ಮೀನುಗಾರರಿಗೆ ಮನೆಗಳನ್ನು ನೀಡಲಾಗಿದೆ. ಮೀನುಗಾರಿಕಾ ರಸ್ತೆ ಹಾಗೂ ಇತರೆ ಸೌಲಭ್ಯಗಳ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಈ) ಮಂಗಳೂರು ಮೀನುಗಾರಿಕೆ ಬಂದರನ್ನು ಸರ್ವಋತು ಬಂದರನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಪ್ರಸ್ತುತ ಇರುವುದಿಲ್ಲ. ಆಳ ಸಮುದ್ರ ಮೀನುಗಾರಿಕೆ ಮಾಡುವವರಿಗೆ ಜಿ.ಪಿ.ಎಸ್., ನೇವಿಗೇಟರ್, ಎಕೋ ಸೌಂಡರ್, ರೇಡಿಯೋ ಟೆಲಿಫೋನ್ ಮೊದಲಾದ ಉಪಕರಣಗಳನ್ನು ಖರೀದಿಸಿ ಆಳವಡಿಸಲು ಪ್ರೋತ್ಸಾಹಿಸುವ ಸಲುವಾಗಿ ಒಟ್ಟು ಮೌಲ್ಯದ ಶೇಕಡಾ 25ರಷ್ಟು (ಗರಿಷ್ಟ ರೂ. 34,000-00) ಸಹಾಯಧನ ನೀಡಲಾಗುತ್ತಿದೆ. ಉಪಗ್ರಹ ಮಾಹಿತಿಯಿಂದ ಮೀನು ದೊರಕುವ ಸಾಧ್ಯತೆಯ ಬಗ್ಗೆ ಮೀನುಗಾರರಿಗೆ ನಕ್ಷೆ ಮತ್ತು ಚಾರ್ಟುಗಳಿಂದ ಮಾಹಿತಿಯನ್ನು ನೀಡಲಾಗುವುದು. ಮೀನುಗಾರರಿಗೆ ಆಧುನಿಕ ತಂತ್ರಜ್ಞಾನ, ಜವಬ್ದಾರಿಯುತ ಮೀನುಗಾರಿಕೆ ಕುರಿತಾಗಿ ತರಬೇತಿಯನ್ನು ನೀಡಲಾಗುತ್ತಿದೆ.